| 1 | 2 |
|---|---|
| 1979-1980 | 01 |
| 1981-1982 | 26 |
| 1983-1984 | 62 |
| ರಿಂದ ಈವರೆಗೆ | |
| ಒಟ್ಟು | 328 |

ಈ) ಪ್ರಸ್ತುತ ದ್ವಿತೀಯ ದರ್ಜೆ ಸಹಾಯಕ ಸಹಿತ ಬೆರಳಚ್ಚುಗಾರರ ಹುದ್ದೆಯಿಂದ ಪ್ರಥಮ ದರ್ಜೆ ಸಹಾಯಕರ ಹುದ್ದೆಗೆ ಬಡ್ತಿ ಪಡೆದವರ ಸಂಖ್ಯೆ: 158 ಹಾಲಿ 206 ಮಂದಿ ದ್ವಿತೀಯ ದರ್ಜೆ ಸಹಾಯಕ ಸಹಿತ ಬೆರಳಚ್ಚುಗಾರರಿಗೆ ಪ್ರಥಮ ದರ್ಜೆ ಸಹಾಯಕ ಹುದ್ದೆಗೆ ಬಡ್ತಿ ನೀಡಬೇಕಾಗಿದೆ. ನಿಯಮಗಳ ಪ್ರಕಾರ ಈ ವೃಂದದವರಿಗೆ ಪ್ರಥಮ ದರ್ಜೆ ಸಹಾಯಕರ ಹುದ್ದೆಯ ಬಡ್ತಿ ಹುದ್ದೆಗಳಲ್ಲಿ ಶೇಕಡಾ 5ರಂತೆ ಬಡ್ತಿಗೆ ಅವಕಾಶವಿದೆ. ಹುದ್ದೆಗಳು ಲಭ್ಯವಾದಂತೆ ನಿಯಮಾನುಸಾರ ಈ ವೃಂದದವರಿಗೆ ಬಡ್ತಿ ನೀಡಲಾಗುವುದು.

## ಬೆಳಗಾವಿ ಜಿಲ್ಲೆಯ ಸಂಕೇಶ್ವರದಲ್ಲಿ ನೂರು ವಸತಿ ಯೋಜನೆ

1988(2619) ಶ್ರೀ ಅಪ್ಪಯ್ಯಗೌಡ ಬಸಗೌಡ ಪಾಟೀಲ (ಸಂಕೇಶ್ವರ) : ಮಾನ್ಯ ವಸತಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ಬೆಳಗಾವಿ ಜಿಲ್ಲೆಯ ಸಂಕೇಶ್ವರದಲ್ಲಿ 100 ವಸತಿ ಯೋಜನೆ ಅಡಿಯಲ್ಲಿ ತೆಗೆದುಕೊಂಡ ಕಾಮಗಾರಿಗಳಾವುವು; ಅದರಲ್ಲಿ ವಿವಿಧ ಅಳತೆಯ ಎಷ್ಟು ನಿವೇಶನ: ಮನೆಗಳ ನಿರ್ಮಾಣ ಮಾಡಲಾಗುತ್ತಿದೆ;

ಆ) ಈ ಯೋಜನೆಗೆ ಅರ್ಜಿಯನ್ನು ಎಂದು ಸ್ವೀಕರಿಸಲಾಯಿತು, ಎಂದು ಚಾಲನೆಗೊಳಿಸಲಾಯಿತು ಹಾಗೂ ಎಂದು ಮುಕ್ತಾಯಗೊಳಿಸಲಾಗುವುದು;

ಇ) ವಿವಿಧ ವರ್ಗಗಳ ನಿವೇಶನ : ಮನೆಗಳಿಗೆ ನಿಗಧಿಪಡಿಸಿರುವ ದರ ಹಾಗೂ ಬಂದಿರುವ ಅರ್ಜಿಗಳೆಷ್ಟು ಹಾಗೂ ಹಂಚಿಕೆ ಯಾವ ರೀತಿ ಮಾಡಲಾಗುವುದು?

ಶ್ರೀ ಸಿ.ಆರ್. ಸಗೀರ್ ಅಹ್ಮದ್ (ವಸತಿ ಸಚಿವರು):

ಅ) ಕರ್ನಾಟಕ ಗೃಹ ಮಂಡಳಿಯ 100 ವಸತಿ ಯೋಜನೆಯಡಿಯಲ್ಲಿ ಬೆಳಗಾವಿ ಜಿಲ್ಲೆಯ ಸಂಕೇಶ್ವರ ಪಟ್ಟಣದ ರಿ.ಸ.ನಂ. 275/1 ಮತ್ತು 275/2 ಎ ರಲ್ಲಿ ವಸತಿ ಯೋಜನೆಯನ್ನು ಕೈಗೊಂಡಿದೆ. ಇದರಲ್ಲಿ ನಿರ್ಮಿಸಲು ಉದ್ದೇಶಿಸಲಾದ ನಿವೇಶನ/ಮನೆಗಳ ವಿವರ ಈ ಕೆಳಕಂಡಂತಿದೆ:

ನಿವೇಶನ

| ಕಡಿಮೆ ಆದಾಯ ವರ್ಗ | ಮಧ್ಯಮ ಆದಾಯ ವರ್ಗ | ಹೆಚ್ಚಿನ ಆದಾಯ ವರ್ಗ | ಒಟ್ಟು |
|---|---|---|---|
| 14 | 24 | 05 | 43 |
| | ಮನೆಗಳು | | |
| 38 | 49 | - | 87 |

ಆ) ಈ ಯೋಜನೆಗೆ ದಿನಾಂಕ:23-12-2002 ರಿಂದ ಅರ್ಜಿಗಳನ್ನು ಸ್ವೀಕರಿಸಲಾಗುತ್ತಿದೆ. ಈ ಯೋಜನೆಗಳಿಗಾಗಿ ಈ ಹಿಂದೆ ಅರ್ಜಿ ಸಲ್ಲಿಸಿರುವವರನ್ನು ಸಹ ಹಂಚಿಕೆಗೆ

ಪರಿಗಣಿಸಲಾಗುವುದು. ಯೋಜನೆಯ ಕಾಮಗಾರಿಯನ್ನು 2-01-2003 ರಂದು ಚಾಲನೆಗೊಳಿಸಲಾಯಿತು. ಹಾಗೂ ದಿನಾಂಕ: 01-10-2003 ರಂದು ಮುಕ್ತಾಯಗೊಳಿಸಲಾಗುವುದು.

ಇ) ಕಡಿಮೆ ಆದಾಯ ವರ್ಗದ ಮನೆಗೆ ರೂ. 3,23,452.00 ರಿಂದ 4,11,188.00 ರವರೆಗೆ ಹಾಗೂ ಮಧ್ಯಮ ಆದಾಯ ವರ್ಗದ ಮನೆಗೆ ರೂ. 5,07,264.00 ರಿಂದ 5,37,473.00 ರವರೆಗೆ ನಿಗಧಿಪಡಿಸಲಾಗಿದೆ. ಮೂಲೆ ನಿವೇಶನಗಳ ಮಾರಾಟದ ಬೆಲೆಯನ್ನು ಹರಾಜು ಮಾರಾಟದ ಮೂಲಕ ನಿಗಧಿಪಡಿಸಬೇಕಾಗಿರುವುದರಿಂದ ಲಭ್ಯವಿರುವ 43 ಮೂಲೆ ನಿವೇಶನಗಳ ಬೆಲೆಯನ್ನು ಇನ್ನೂ ನಿಗಧಿಪಡಿಸಿರುವುದಿಲ್ಲ. ಇದುವರೆಗೆ ವಿವಿಧ ವರ್ಗಗಳ ನಿವೇಶನ/ಮನೆಗಳಿಗೆ ಬಂದಿರುವ ಅರ್ಜಿಗಳು ಒಟ್ಟು 322 ನಿವೇಶನ/ಮನೆಗಳ ಹಂಚಿಕೆಯನ್ನು ಕರ್ನಾಟಕ ಗೃಹ ಮಂಡಳಿಯ ಹಂಚಿಕೆ ನಿಯಮಾವಳಿ ಪ್ರಕಾರ ಮಾಡಲಾಗುವುದು.

ಈ) ಇಲ್ಲ.

ಉ) ಬೇರೆ ಸ್ಥಳದಿಂದ ಈ ಸ್ಥಳಕ್ಕೆ ಅರ್ಜಿಗಳು ಬದಲಾವಣೆಗೆ ಹಾಗೂ ನಿವೇಶನದಿಂದ ಮನೆಗೆ ಬದಲಾವಣೆಯನ್ನು ಅರ್ಜಿದಾರರು ಇಚ್ಛಿಸಿದಲ್ಲಿ ಬದಲಾಯಿಸಿಕೊಳ್ಳುವ ಅವಕಾಶವನ್ನು ಕಲ್ಪಿಸಲಾಗಿದೆ. ಅರ್ಜಿದಾರರು ಇಷ್ಟಪಟ್ಟಲ್ಲಿ ನಿವೇಶನದಿಂದ ಮನೆಗೆ ತಮ್ಮ ನೋಂದಣಿಯನ್ನು, ಲಿಖಿತ ಅರ್ಜಿಯ ಮೂಲಕ ಗೃಹ ಮಂಡಳಿಗೆ ಸಲ್ಲಿಸಿ, ತಮ್ಮ ನೋಂದಣಿಯನ್ನು ಇಷ್ಟದಂತೆ ಬದಲಾಯಿಸಿಕೊಳ್ಳಬಹುದಾಗಿದೆ. ಲಭ್ಯತೆಯ ಆಧಾರದ ಮೇಲೆ ನಿಯಮಾನುಸಾರ ಹಂಚಿಕೆಗೆ ಅಂತಹ ಅರ್ಜಿಗಳನ್ನು ಪರಿಗಣಿಸಲಾಗುವುದು.

**ಯಶವಂತಪುರ ಹೋಬಳಿ ಅಬ್ಬಿಗೆರೆ ಗ್ರಾಮ ಪಂಚಾಯ್ತಿಯ ಸರ್ವೆ ನಂ. 11 ರಲ್ಲಿ ಸುಳ್ಳುದಾಖಲೆ ಸೃಷ್ಟಿಸಿ ಖಾತೆ ಮಾಡಿರುವುದು**

1989(2543) ಶ್ರೀ ಅಶೋಕ್.ಆರ್.(ಉತ್ತರಹಳ್ಳಿ) : ಮಾನ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂ.ರಾಜ್ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ಬೆಂಗಳೂರು ಉತ್ತರ ತಾಲ್ಲೂಕು ಯಶವಂತಪುರ ಹೋಬಳಿ ಅಬ್ಬಿಗೆರೆ ಗ್ರಾಮ ಪಂಚಾಯ್ತಿಯ ಸರ್ವೆ ನಂ.11 ರಲ್ಲಿ ಸುಳ್ಳು ದಾಖಲೆ ಸೃಷ್ಟಿ ಮಾಡಿ ರೆವಿನ್ಯೂ ಜಾಗವನ್ನು ಗ್ರಾಮಠಾಣಾ ಖಾತೆ ಮಾಡಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ;

ಆ) ಹೀಗೆ ಸುಳ್ಳು ದಾಖಲೆ ನೀಡಿ ಖಾತಾ ಮಾಡಿಕೊಂಡಿರುವ ಹೆಸರುಗಳೇನು;

ಇ) ಖಾತಾ ಮಾಡಿರುವ ಅಧಿಕಾರಿಯ ಮೇಲೆ ಸರ್ಕಾರ ಕೈಗೊಂಡಿರುವ ಕಾನೂನು ಕ್ರಮವೇನು?

ಶ್ರೀ ಎಂ.ವೈ. ಘೋರ್ಪಡೆ (ಗ್ರಾಮೀಣಾಭಿವೃದ್ಧಿ ಮತ್ತು ಪಂ.ರಾಜ್ ಸಚಿವರು):

ಅ) ಇಲ್ಲ

ಆ) ಅನ್ವಯಿಸುವುದಿಲ್ಲ

ಇ) ಅನ್ವಯಿಸುವುದಿಲ್ಲ

**ಮಂಡ್ಯ ನಗರದಲ್ಲಿನ ಕೊಳಚೆ ಪ್ರದೇಶದ ನಿವಾಸಿಗಳಿಗೆ ನಿವೇಶನದ ಹಕ್ಕುಪತ್ರ ವಿತರಣೆ**

1990(2548) ಶ್ರೀ ಆತ್ಮಾನಂದ ಎಂ.ಎಸ್.(ಮಂಡ್ಯ) : ಮಾನ್ಯ ವಸತಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?